**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಲಿಂಗಸೂಗೂರು**

**ಉಪಸ್ಥಿತರು:–**

**ಶ್ರೀ ಮಂಜುನಾಥ** ಬಿ.ಕಾಂ.ಎಲ್.ಎಲ್.ಬಿ.,

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು, ಲಿಂಗಸುಗೂರು.**

**ಕ್ರಿಮಿನಲ್ ಪ್ರಕರಣ ಸಂಖ್ಯೆ: 455/2018**

**ದಿನಾಂಕ: 16ನೇ ಜನೇವರಿ 2019**

ಫಿರ್ಯಾದಿದಾರ : ಕರ್ನಾಟಕ ರಾಜ್ಯ ಇವರ ಪರವಾಗಿ
ಹಟ್ಟಿ ಪೊಲೀಸ್ ಠಾಣೆ.

(ಸಹಾಯಕ ಸರ್ಕಾರಿ ಅಭಿಯೋಜಕರಿಂದ ಪ್ರತಿನಿಧಿಸಿದೆ.)

-:ವಿರುದ್ಧ:-

ಆರೋಪಿಗಳು :

1) ಸಂತೋಷ ಕುಮಾರ ತಂದೆ ವೆಂಕಣ್ಣ @ ಯಂಕಪ್ಪ ಹುಣಸಿಗಿಡದ,
ವಯಸ್ಸುಃ 31 ವರ್ಷಗಳು, ಉದ್ಯೋಗಃಒಕ್ಕಲುತನ,
ಸಾಃ ಗುರುಗುಂಟಾ, ತಾಃಲಿಂಗಸುಗೂರು.

2) ಅಮರೇಶ ತಂದೆ ವೆಂಕಣ್ಣ @ ಯಂಕಪ್ಪ ಹುಣಸಿಗಿಡದ,
ವಯಸ್ಸುಃ 33 ವರ್ಷಗಳು, ಉದ್ಯೋಗಃ ಕಿರಾಣಿ ವ್ಯಾಪಾರಿ,
ಸಾಃ ಗುರುಗುಂಟಾ, ತಾಃಲಿಂಗಸುಗೂರು.

3) ಪ್ರಕಾಶ ತಂದೆ ವೆಂಕಣ್ಣ @ ಯಂಕಪ್ಪ ಹುಣಸಿಗಿಡದ,
ವಯಸ್ಸುಃ 22 ವರ್ಷಗಳು, ಉದ್ಯೋಗಃ ಒಕ್ಕಲುತನ,
ಸಾಃ ಗುರುಗುಂಟಾ, ತಾಃಲಿಂಗಸುಗೂರು.

**( ಶ್ರೀ ಹೆಚ್.ಜಿ.ಎಮ್. ವಕೀಲರು ಪ್ರತಿನಿಧಿಸಿದ್ದಾರೆ)**

| | | |
|---|---|---|
| 1. | ಘಟನೆ ನಡೆದ ದಿನಾಂಕ | 05–07–2017 |
| 2. | ಪ್ರಕರಣ ದಾಖಲಾದ ದಿನಾಂಕ | 05–07–2017 |
| 3. | ಕಲಂಗಳು | ಭಾ.ದಂ.ಸಂ.ಕಲಂ 323, 341, 504, 506 ಸಹಕಲಂ 34 ರ ಐಪಿಸಿ |
| 4. | ಸಾಕ್ಷ್ಯಗಳ ವಿಚಾರಣೆ ಪ್ರಾರಂಭವಾದ ದಿನಾಂಕ | 31–12–2018 |
| 5. | ಸಾಕ್ಷ್ಯಗಳ ಮುಕ್ತಾಯವಾದ ದಿನಾಂಕ | 31–12–2018 |
| 6. | ತೀರ್ಪಿನ ಆದೇಶ | ಅಂತಿಮ ಆದೇಶದಂತೆ |

**:: ತೀರ್ಪು ::**

ಹಟ್ಟಿ ಆರಕ್ಷಕ ಉಪ ನಿರೀಕ್ಷಕರು ಆರೋಪಿತರ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂಃ 323, 341, 504, 506 ಸಹಕಲಂ 34 ರ ಐಪಿಸಿ ರೀತ್ಯ ಅಪರಾಧ ಮಾಡಿದ್ದಾರೆಂದು ಆಪಾದಿಸಿ ಈ ಅಂತಿಮ ವರದಿ ಸಲ್ಲಿಸಿರುತ್ತಾರೆ.

2. **ಅಭಿಯೋಜನೆ ಕೇಸಿನ ಸಂಕ್ಷಿಪ್ತ ಸಾರಾಂಶವೇನೆಂದರೆ:–** ಹಟ್ಟಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಬರುವ ಗುರುಗುಂಟಾ ಗ್ರಾಮದಲ್ಲಿ ದಿನಾಂಕ: 02–07–2017 ರಂದು ರಾತ್ರಿ 10–00 ಗಂಟೆಯ ಸುಮಾರಿಗೆ ಚಾಸಾ–1 ನಂದೇಶರವರು ಬಸ್ಸಿನಿಂದಾ ಕೆಳಗೆ ಇಳಿದು ಮನೆಗೆ ಹೋಗುತ್ತಿರುವಾಗ 1ನೇ ಆರೋಪಿಯು ಪಿರ್ಯಾದಿಗೆ ತಡೆದು ನಿಲ್ಲಿಸಿ ಎಲೇ ಸೂಳೇ ಮಗನೇ ನನ್ನ ಮೇಲೆ ಮಟಕಾ ಕೇಸ್ ಮಡಿಸಿ, ನನ್ನ ಸಂಸಾರ ನಡೆಸಲಿಕ್ಕೆ ಅಡಚಣೆ ಮಾಡುತ್ತಿದ್ದಿಯಾ ನಿನ್ನನ್ನು ಸಾಯಿಸದೇ ಬಿಡುವುದಿಲ್ಲಾ ನಿನಗೆ ಚಪ್ಪಲಿಯಿಂದ ಹೊಡೆಯುತ್ತೇನೆ ಎಂದು ಕೂಗಾಡುತ್ತಾ ಅವಾಚ್ಯವಾಗಿ ಬೈದು, ಎಲೇ ಮಗನೇ ಈ ದಿನ ಉಳಿದುಕೊಂಡಿದ್ದೀಯಾ ಮುಂದೆ ನಿನ್ನನ್ನು ಯಾರು ಉಳಿಸುತ್ತಾರೆ ನಾನು ನೋಡುತ್ತೇನೆ ಎಂದು ಜೀವದ ಬೆದರಿಕೆ ಹಾಕಿದ್ದು ನಂತರ ಪಿರ್ಯಾದಿಯು ಸ್ವಲ್ಪ ಮುಂದೆ ಹೋಗುತ್ತಿದ್ದಾಗ 2 & 3ನೇ ಆರೋಪಿಗಳು ಬಂದು ಪಿರ್ಯಾದಿಗೆ ನನ್ನ

ತಮ್ಮನ ಮಟಕಾ ದಂದೆ ನಿಲ್ಲಿಸಿದ್ದೀಯಾ ನೀನು ಹೇಗೆ ಜೀವನ ಮಾಡುತ್ತೀಯಾ ಎಂದು ಚಪ್ಪಲಿಯನ್ನು ತೋರಿಸಿದ್ದು, ನಂತರ 3ನೇ ಆರೋಪಿಯು ಪಿರ್ಯಾದಿಯ ಎದೆಯ ಮೇಲಿನ ಅಂಗಿ ಹಿಡಿದು ಎಳೆದಾಡಿ ತನ್ನ ಕೈಗಳಿಂದ ಕಪಾಳಕ್ಕೆ ಹೊಡೆದಿದ್ದು, ಆಗ ಜಗಳವನ್ನು ನೋಡಿ ಚಾ.ಸಾ–2, 4 ಮತ್ತು 5ರವರು ಬಿಡಿಸಿಕೊಂಡು ಆಗ 2 & 3ನೇ ಆರೋಪಿಗಳು ಪಿರ್ಯಾದಿಗೆ ನಿನ್ನ ಜೀವ ತೆಗೆಯುತ್ತೇನೆ ಎಂದು ಜೀವದ ಬೆದರಿಕೆ ಹಾಕಿದ್ದು ಎಂದು ಫಿರ್ಯಾದಿಯು ನೀಡಿದ ಲಿಖಿತ ದೂರನ್ನು ಸ್ವೀಕರಿಸಿ ಹಟ್ಟಿ ಪೋಲೀಸ್ ಠಾಣೆಯ ಪೊಲೀಸರು ತನಿಖೆ ಮಾಡಿ ಆರೋಪಿಗಳು ಮೇಲ್ಕಂಡ ಕಲಂಗಳಂತೆ ಅಪರಾಧವೆಸಗಿದ್ದಾರೆಂದು ಆರೋಪಿಸಿ ಈ ಅಂತಿಮ ವರದಿಯನ್ನು ಸಲ್ಲಿಸಿರುತ್ತಾರೆ.

3. ಅಂತಿಮ ವರದಿಯ ಆಧಾರದ ಮೇಲೆ ನ್ಯಾಯಾಲಯವು ಆರೋಪಗಳ ಸಂಜ್ಞೆಯತೆಯನ್ನು ತೆಗೆದುಕೊಂಡು ಸಮನ್ಸ್ ನೀಡಿದ ಮೇರೆಗೆ ಆರೋಪಿಗಳು ನ್ಯಾಯಾಲಯಕ್ಕೆ ಹಾಜರಾಗಿ ಜಾಮೀನಿನ ಮೇಲೆ ಬಿಡುಗಡೆ ಹೊಂದಿದ್ದಾರೆ. ದಂ.ಪ್ರ.ಸಂ.ಯ ಕಲಂ.207 ರಂತೆ ಅಭಿಯೋಜನ ಕೇಸಿನ ದಾಖಲೆಗಳ ನಕಲುಗಳನ್ನು ನೀಡಲಾಯಿತು. ಆರೋಪಣೆಗಳಿಗೆ ದೋಷಾರೋಪಣೆ ರಚಿಸಿದ ನಂತರ ಅದರ ಸಾರಾಂಶವನ್ನು ಆರೋಪಿಗಳಿಗೆ ಓದಿ ಹೇಳಲಾಗಿ ತಾವು ತಪ್ಪು ಮಾಡಿಲ್ಲವೆಂದು ಹೇಳಿದ್ದರಿಂದ ಅಭಿಯೋಜನೆಯವರು ತಮ್ಮ ಪರವಾಗಿ ಒಬ್ಬ ಸಾಕ್ಷಿಯನ್ನು ವಿಚಾರಣೆ ಮಾಡಿಕೊಂಡು ಅವರ ಮೂಲಕ ಒಂದು ದಾಖಲೆಯನ್ನು ಗುರುತಿಸಿಕೊಂಡಿರುತ್ತಾರೆ. ಪ್ರಕರಣದ ಪಿರ್ಯಾದಿ ತಮ್ಮ ಸಾಕ್ಷ್ಯದಲ್ಲಿ ಅಭಿಯೋಜನಾ ಕೇಸನ್ನು ಬೆಂಬಲಿಸಿ ಸಾಕ್ಷ್ಯ ನುಡಿಯದ ಕಾರಣ ಉಳಿದ ಸಾಕ್ಷಿದಾರರನ್ನು ವಿಚಾರಣೆ ಮಾಡಿದರೂ ಸಹ ಯಾವುದೇ ಪ್ರಯೋಜನವಾಗುವುದಿಲ್ಲವೆಂದು ಮಾನ್ಯ ಸ.ಸ.ಅ. ರವರ ಕೋರಿಕೆಯನ್ನು ತಿರಸ್ಕರಿಸಿ ಅಭಿಯೋಜನೆಯ ಪರ ವಿಚಾರಣೆಯನ್ನು ಮುಕ್ತಾಯಗೊಳಿಸಲಾಯಿತು. ಆರೋಪಿಗಳ

ವಿರುದ್ಧ ಯಾವುದೇ ಆಪಾದಿಸುವಂತಹ ಸಾಕ್ಷ್ಯ ಇರದ ಕಾರಣ ದಂ.ಪ್ರ.ಸಂ. ಕಲಂ. 313ರ ಹೇಳಿಕೆಗಳನ್ನು ದಾಖಲಿಸುವ ಹಂತವನ್ನು ಕೈಬಿಡಲಾಯಿತು. ಕಾರಣ ಉಭಯತ್ರರ ವಾದ–ವಿವಾದಗಳನ್ನು ಕೇಳಿ, ಕಡತವನ್ನು ಪರಿಶೀಲಿಸಿದಾಗ ಈ ಕೆಳಗಿನ ಪ್ರಶ್ನೆಗಳು ನ್ಯಾಯಾಲಯದ ತೀರ್ಮಾನಕ್ಕೆ ಉದ್ಭವಿಸಿರುತ್ತವೆ.

1. ಹಟ್ಟಿ ಪೋಲೀಸ್ ಠಾಣಾ ವ್ಯಾಪ್ತಿಯಲ್ಲಿ ಬರುವ ಗುರುಗುಂಟಾ ಗ್ರಾಮದಲ್ಲಿ ದಿನಾಂಕ 02–07–2017 ರಂದು ರಾತ್ರಿ 10–00 ಗಂಟೆಯ ಸುಮಾರಿಗೆ ಸಾಕ್ಷಿ ನಂ.1 ನಂದೇಶರವರು ಬಸ್ಸಿನಿಂದ ಕೆಳಗೆ ಇಳಿದು ಮನೆಗೆ ಹೋಗುತ್ತಿರುವಾಗ 1ನೇ ಆರೋಪಿಯು ಫಿರ್ಯಾದಿದಾರನನ್ನು ಮುಂದಕ್ಕೆ ಹೋಗದಂತೆ ಅಕ್ರಮವಾಗಿ ತಡೆದು ನಿಲ್ಲಿಸಿದ್ದು ಆ ಮೂಲಕ ಭಾ.ದಂ.ಸಂ. 341 ಸಹಕಲಂ 34ರ ಅಡಿಯಲ್ಲಿ ಅಪರಾದವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿದ್ದಾರೆ ಎಂದು ಅಭಿಯೋಜನೆಯವರು ಸಾಬೀತುಪಡಿಸುವರೇ?

2. ಮೇಲೆ ಹೇಳಿದ ದಿನಾಂಕ, ವೇಳೆ ಹಾಗೂ ಸ್ಥಳದಲ್ಲಿ ಮೇಲೆ ತಿಳಿಸಿದ ವಿಷಯವಾಗಿ 1ನೇ ಆರೋಪಿಯು ಫಿರ್ಯಾದಿದಾರರನ್ನು ತೆಡೆದು ನಿಲ್ಲಿಸಿ, ಏಲೇ ಸೂಳೇಮಗನೇ ನನ್ನ ಮೇಲೆ ಮಟಕಾ ಕೇಸ್ ಮಾಡಿಸಿ ನನ್ನ ಸಂಸಾರಕ್ಕೆ ಅಡಚಣೆ ಮಾಡುತ್ತಿಯಾ ಎಂದು ನಿನಗೆ ಚಪ್ಪಲಿಯಿಂದ ಹೊಡೆಯುತ್ತೇನೆ ಎಂದು ಅವಾಚ್ಯವಾಗಿ ಬೈದಿದ್ದು ಆ ಮೂಲಕ ಭಾ.ದಂ.ಸಂ. 504 ಸಹಕಲಂ 34ರ ಅಡಿಯಲ್ಲಿ ಅಪರಾದವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿದ್ದಾರೆ ಎಂದು ಅಭಿಯೋಜನೆಯವರು ಸಾಬೀತುಪಡಿಸುವರೇ?

3. ಮೇಲೆ ಹೇಳಿದ ದಿನಾಂಕ, ವೇಳೆ ಹಾಗೂ ಸ್ಥಳದಲ್ಲಿ ಮೇಲೆ ತಿಳಿಸಿದ ವಿಷಯವಾಗಿ 3ನೇ ಆರೋಪಿಯು ಸಾಕ್ಷಿ ನಂ.1 ರವರಿಗೆ ಎದೆಯ ಮೇಲಿನ ಅಂಗಿ ಹಿಡಿದು ಎಳೆದಾಡಿ ತನ್ನ ಕೈಗಳಿಂದ ಕಪಾಳಕ್ಕೆ ಹೊಡೆದಿದ್ದು ಆ ಮೂಲಕ

ಭಾ.ದಂ.ಸಂ 323 ಸಹಕಲಂ 34ರಡಿ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿದ್ದಾರೆ ಎಂದು ಅಭಿಯೋಜನೆಯವರು ಸಾಬೀತುಪಡಿಸುವರೇ?

4. ಮೇಲೆ ಹೇಳಿದ ದಿನಾಂಕ, ವೇಳೆ ಹಾಗೂ ಸ್ಥಳದಲ್ಲಿ ಮೇಲೆ ತಿಳಿಸಿದ ವಿಷಯವಾಗಿ ಆರೋಪಿಗಳು ಸದರಿ ಸಾಕ್ಷಿ ನಂ.1 ರವರಿಗೆ 1ನೇ ಆರೋಪಿಯು ಚ.ಸಾ–1ರವರಿಗೆ ಈ ದಿನ ಉಳಿದುಕೊಂಡಿದ್ದೀಯಾ ಮುಂದೆ ನಿನ್ನನ್ನು ಯಾರು ಉಳಿಸುತ್ತಾರೆ ನಾನು ನೋಡುತ್ತೇನೆ ಎಂದು, ಮತ್ತು 2 & 3ನೇ ಆರೋಪಿಗಳು ನಿನ್ನ ಜೀವ ತೆಗೆಯುತ್ತೇವೆ ಎಂದು ಜೀವದ ಬೆದರಿಕೆ ಹಾಕಿದ್ದು ಆ ಮೂಲಕ ಭಾ.ದಂ.ಸಂ 506 ಸಹಕಲಂ 34ರಡಿ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿದ್ದಾರೆ ಎಂದು ಅಭಿಯೋಜನೆಯವರು ಸಾಬೀತುಪಡಿಸುವರೇ?

5. ಯಾವ ಆದೇಶ?

ಈ ಪ್ರಶ್ನೆಗಳನ್ನು ರುಜುವಾತು ಪಡಿಸಬೇಕಾದಲ್ಲಿ ಅಭಿಯೋಜನೆಯವರು ಸಾಕಷ್ಟು ನಂಬಲಾರ್ಹವಾದ ಮತ್ತು ಸಂಶಯಾತೀತವಾದ ಸಾಕ್ಷ್ಯವನ್ನು ಕೊಡಬೇಕಾಗುತ್ತದೆ. ಪ್ರಕರಣದ ಕಡತವನ್ನು ಪರಿಶೀಲಿಸಿ ಹಾಗೂ ವಾದ–ವಿವಾದವನ್ನು ಕೇಳಿದ ನಂತರ ಮೇಲ್ಕಂಡ ಪ್ರಶ್ನೆಗಳನ್ನು ನಕಾರಾತ್ಮಕವಾಗಿ ಉತ್ತರಿಸಿ ಈ ಕೆಳಗಿನ ಕಾರಣಗಳನ್ನು ಕೊಡಬಯಸುತ್ತೇನೆ.

## <u>:ಕಾರಣಗಳು:–</u>

<u>**4. ಪ್ರಶ್ನೆ: 1 ರಿಂದ 4 :–**</u> ಈ ನಾಲ್ಕು ಪ್ರಶ್ನೆಗಳ ಘಟನೆಗಳು ಏಕ ಕಾಲದಲ್ಲಿ ನಡೆದಿದ್ದು ಸಂಗತಿಗಳನ್ನು ಪುನರುಚ್ಛರಿಸುವುದನ್ನು ತಪ್ಪಿಸಲು ಎಲ್ಲಾ ಪ್ರಶ್ನೆಗಳನ್ನು ಏಕ ಕಾಲಕ್ಕೆ ಚರ್ಚೆಗೆ ತೆಗೆದುಕೊಳ್ಳುತ್ತೇನೆ.

ಅಭಿಯೋಜನೆಯವರು ಪ್ರಕರಣವನ್ನು ರುಜುವಾತುಪಡಿಸಲು ತಮ್ಮ ಪರವಾಗಿ ಒಟ್ಟು 06 ಜನ ಸಾಕ್ಷಿದಾರರನ್ನು ನಮೂದಿಸಿದ್ದು, ಅವರುಗಳಲ್ಲಿ ಪ್ರಕರಣದ ಫಿರ್ಯಾದಿ ಚಾ.ಸಾ–1 ನಂದೀಶರವರನ್ನು ಮಾತ್ರ ವಿಚಾರಣೆಗೆ ಒಳಪಡಿಸಿದ್ದು, ಸದರಿಯವರು ಅಭಿಯೋಜನೆಯ ಪ್ರಕರಣವನ್ನು ಬೆಂಬಲಿಸದ ಕಾರಣ ಉಳಿದ ಸಾಕ್ಷಿದಾರರ ಸಾಕ್ಷ್ಯಾವನ್ನು ಕೈಬಿಡಲಾಯಿತು. ಅಭಿಯೋಜನೆಯವರು ತಮ್ಮ ಪರವಾಗಿ ನಿಶಾನೆ ಪಿ :1 ನ್ನು ಗುರುತಿಸಿರುತ್ತಾರೆ.

5. ಅಭಿಯೋಜನೆಯವರು ಪ್ರಕರಣದ ಫಿರ್ಯಾದಿ ಚಾ.ಸಾ–1 ನಂದೀಶರವರನ್ನು ಅ.ಸಾ–1 ಎಂದು ವಿಚಾರಣೆ ಮಾಡಿದ್ದು, ಸದರಿಯವರು ತಮ್ಮ ಸಾಕ್ಷ್ಯದಲ್ಲಿ ಈಗ ಅಂದಾಜು ಒಂದು ವರ್ಷದ ಹಿಂದೆ ವರಾತ್ರಿ 10–00 ಗಂಟೆಗೆ ತನಗೂ ಮತ್ತು ಆರೋಪಿತರಿಗೂ ಬಾಯಿ ಮಾತಿನ ಜಗಳವಾಗಿರುವುದಾಗಿ ಆದರೆ ಆರೋಪಿತರು ತನ್ನನ್ನು ತಡೆದು ನಿಲ್ಲಿಸಿರುವದಿಲ್ಲ, ಹೊಡೆಬಡೆ ಮಾಡಿರುವದಿಲ್ಲ, ಅವಾಚ್ಯ ಶಬ್ದದಿಂದ ಬೈದಿರುವದಿಲ್ಲ ಮತ್ತು ಜೀವದ ಬೆದರಿಕೆ ಹಾಕಿರುವುದಿಲ್ಲ, ಬಾಯಿ ಮಾತಿನ ಜಗಳವಾದ ಕಾರಣ ಠಾಣೆಗೆ ಹೋಗಿ ದೂರು ಸಲ್ಲಿಸಿರುವುದಾಗಿ ನಂತರ ಪೋಲಿಸರು ತಾನು ತೋರಿಸಿದ ಮೇರೆಗೆ ಗುನ್ನಾ ಸ್ಥಳದ ಪಂಚನಾಮೆ ಮಾಡಿರುವದಿಲ್ಲವೆಂದು

ನುಡಿದಿರುತ್ತಾರೆ. ಸದರಿಯವರ ಸಾಕ್ಷಿಯನ್ನು ಗಮನಿಸಲಾಗಿ ಸದರಿಯವರು ಅಭಿಯೋಜನೆಯ ಕೇಸಿಗೆ ಸಂಪೂರ್ಣವಾಗಿ ವಿರುದ್ಧವಾಗಿ ನುಡಿದಿರುತ್ತಾರೆ. ಅಭಿಯೋಜಕರ ವಿನಂತಿಯ ಮೇರೆಗೆ ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ನೀಡಲಾಗಿದ್ದು, ಸದರಿ ಪಾಟೀ ಸವಾಲಿನಲ್ಲಿ ಅಭಿಯೋಜನೆಗೆ ಅನುಕೂಲಕರವಾಗುವಂತಹ ಯಾವುದೇ ಅಂಶಗಳನ್ನು ಈ ಸಾಕ್ಷಿಗಳಿಂದ ಹೇಳಿಸಿಕೊಂಡಿಲ್ಲ.

6. ಅಭಿಯೋಜನೆಯವರು ವಿಚಾರಣೆಗೆ ಒಳಪಡಿಸಿದ ಫಿರ್ಯಾದಿ ಸಾಕ್ಷ್ಯವನ್ನು ಗಮನಿಸಲಾಗಿ ಸದರಿಯವರು ಅಭಿಯೋಜನೆಯ ಪ್ರಕರಣಕ್ಕೆ ವಿರುದ್ದವಾಗಿ ನುಡಿದಿದ್ದು ಕಂಡುಬರುತ್ತದೆ. ಸದರಿಯವರು ಆರೋಪಿಗಳೊಂದಿಗೆ ರಾಜಿ ಮಾಡಿಕೊಂಡಿರುವುದು ಕಂಡು ಬರುತ್ತದೆ. ಸದರಿಯವರು ಆರೋಪಿಗಳೊಂದಿಗೆ ರಾಜಿ ಮಾಡಿಕೊಂಡ ಕಾರಣ ಅಭಿಯೋಜನೆಯ ಪ್ರಕರಣಕ್ಕೆ ವಿರುದ್ದವಾಗಿ ನುಡಿದಿರುವುದು ಕಂಡುಬರುತ್ತದೆ. ಕಾರಣ ಆರೋಪಿತರ ವಿರುದ್ಧ ನಂಬಲರ್ಹವಾದ ಸಾಕ್ಷಾಧಾರಗಳು ಕಂಡುಬರದ ಕಾರಣ ಅಭಿಯೋಜನೆಯವರು ಆರೋಪಿತರ ವಿರುದ್ಧ ತಮ್ಮ ಪ್ರಕರಣವನ್ನು ಸಂಶಯಾತೀತವಾಗಿ ರುಜುವಾತುಪಡಿಸಲು ವಿಫಲರಾಗಿರುತ್ತಾರೆಂದು ಅಭಿಪ್ರಾಯಪಟ್ಟು ಮೇಲ್ಕಂಡ ಪ್ರಶ್ನೆಗಳನ್ನು ನಕಾರಾತ್ಮಕವಾಗಿ ಉತ್ತರಿಸುತ್ತೇನೆ.

7. **<u>ಪ್ರಶ್ನೆ:5:–</u>** ಮೇಲ್ಕಂಡ ಪ್ರಶ್ನೆಗಳನ್ನು ಅಭಿಯೋಜನೆಯ ವಿರುದ್ಧವಾಗಿ ನೀಡಿರುವುದರಿಂದ ಸದರಿ ಸಂಶಯದ ಲಾಭವನ್ನು ಅಪಾದಿತರಿಗೆ ನೀಡಿ ಈ ಕೆಳಕಂಡ ಆದೇಶ ಹೊರಡಿಸಿರುತ್ತೇನೆ.

**ಆದೇಶ**

ದಂಡ ಪ್ರಕ್ರಿಯ ಸಂಹಿತೆ ಕಲಂ 248(1)ರ ಕೆಳಗೆ ಪ್ರದತ್ತವಾದ ಅಧಿಕಾರ ಚಲಾಯಿಸಿ 1 ರಿಂದ 3ನೇ ಆರೋಪಿತರನ್ನು ಭಾ.ದಂ.ಸಂ.ಯ ಕಲಂ 341, 323, 504, 506 ಸಹಿತ ಕಲಂ 34 ರ ಐಪಿಸಿ ಆರೋಪಗಳಿಗೆ ನಿರ್ದೋಷಿಗಳೆಂದು ಬಿಡುಗಡೆ ಮಾಡಲಾಗಿದೆ.

ಆರೋಪಿತರು ಮತ್ತು ಅವರ ಜಾಮೀನುದಾರರ ಬರೆದುಕೊಟ್ಟ ಜಾಮೀನು ಮುಚ್ಚಳಿಕೆಗಳು ರದ್ದುಗೊಂಡಿರುತ್ತವೆ.

ಆರೋಪಿತರು ಮತ್ತು ಅವರ ಜಾಮೀನುದಾರರ ಕಲಂ 437(ಎ) ಅಡಿಯಲ್ಲಿ ಬರೆದುಕೊಟ್ಟ ಜಾಮೀನು ಮುಚ್ಚಳಿಕೆಗಳು 6 ತಿಂಗಳುಗಳ ನಂತರ ರದ್ದುಗೊಳ್ಳುತ್ತವೆ.

(ಶೀಘ್ರಲಿಪಿಗಾರರಿಗೆ ಉಕ್ತಲೇಖನ ಕೊಟ್ಟು ಗಣಕೀಕರಿಸಿದ ನಂತರ ಪರಿಷ್ಕರಿಸಿ ತಿದ್ದುಪಡಿ ಮಾಡಿ ದಿನಾಂಕ 16ನೇ ಜನೇವರಿ 2019 ರಂದು ಬಹಿರಂಗ ನ್ಯಾಯಾಲಯದಲ್ಲಿ ಘೋಷಿಸಲಾಯಿತು.)

ಸಹಿ/–
(ಮಂಜುನಾಥ)
ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಲಿಂಗಸೂಗೂರು.

**ಅನುಬಂಧಃ–**

1) ಅಭಿಯೋಜನೆ ಪರ ಪರೀಕ್ಷಿಸಲ್ಪಟ್ಟ ಸಾಕ್ಷಿಗಳುಃ

ಪ್ರಾಸಾ–1 : ನಂದೀಶ ತಂದೆ ಅಂಬಣ್ಣ

2) ಆರೋಪಿತರ ಪರ ಪರೀಕ್ಷಿಸಲ್ಪಟ್ಟ ಸಾಕ್ಷಿಗಳುಃ

--- ಇಲ್ಲಾ ----

3) ಅಭಿಯೋಜನೆ ಪರ ಗುರ್ತಿಸಲ್ಪಟ್ಟ ದಾಖಲೆಗಳುಃ

ನಿಪಿ.1 : ದೂರು
ನಿಪಿ.1(ಎ) : ಪ್ರಾ.ಸಾ–1 ರವರ ಸಹಿ

4) ಆರೋಪಿತರ ಪರ ಗುರ್ತಿಸಲ್ಪಟ್ಟ ದಾಖಲೆಗಳುಃ

---- ಇಲ್ಲಾ ----

5) ಮುದ್ದೆಮಾಲಿನ ಪಟ್ಟಿಃ

---- ಇಲ್ಲಾ ----

ಸಹಿ/–
(ಮಂಜುನಾಥ)
ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಲಿಂಗಸೂಗೂರು.